**ಕರ್ನಾಟಕ ಸರ್ಕಾರ**

ಸಂಖ್ಯೆ:ಕಂಇ 240 ಬಿಎಸ್‌ಸಿ 2022

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 25.01.2024

**ಇವರಿಂದ:**

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಕಂದಾಯ ಇಲಾಖೆ,
ಬೆಂಗಳೂರು.

**"ಅತೀ ಜರೂರು"**

**ಇವರಿಗೆ:**

ಎಲ್ಲಾ ಜಿಲ್ಲಾಧಿಕಾರಿಗಳು.

**ಮಾನ್ಯರೆ,**

**ವಿಷಯ:** ಕಂದಾಯ ಇಲಾಖೆಯ ಗ್ರಾಮ ಆಡಳಿತ ಅಧಿಕಾರಿ ಹುದ್ದೆಗಳ ಪ್ರಸ್ತುತ ವಿವರಗಳನ್ನು ಸಲ್ಲಿಸುವ ಬಗ್ಗೆ.

-------------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕಂದಾಯ ಇಲಾಖೆಯ ವ್ಯಾಪ್ತಿಯಲ್ಲಿ ಖಾಲಿಯಿರುವ ಗ್ರಾಮ ಆಡಳಿತಾಧಿಕಾರಿ ಹುದ್ದೆಗಳನ್ನು ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ನೇರ ನೇಮಕಾತಿ ಮಾಡುವ ಸಂಬಂಧ ಆರ್ಥಿಕ ಇಲಾಖೆಯು 2023-24, 2024-25 ಹಾಗೂ 2025-26 ನೇ ಸಾಲಿಗೆ ವಾರ್ಷಿಕವಾಗಿ 500 ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆಯು ಸಹಮತಿ ನೀಡಿರುತ್ತದೆ.

ಎಲ್ಲ ಜಿಲ್ಲೆಗಳಲ್ಲಿ ಮಂಜೂರಾದ ಹುದ್ದೆಗಳು, ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಗಳು ಹಾಗೂ ಖಾಲಿ ಹುದ್ದೆಗಳಿಗನುಗುಣವಾಗಿ ಪ್ರಸಕ್ತ ಖಾಲಿಯಿರುವ 1820 ಹುದ್ದೆಗಳ ಪೈಕಿ 1000 ಹುದ್ದೆಗಳನ್ನು ನೇರನೇಮಕಾತಿಯಡಿ ಭರ್ತಿಮಾಡಿಕೊಳ್ಳಲು ಉದ್ದೇಶಿಸಲಾಗಿರುತ್ತದೆ.

ಕಂದಾಯ ಇಲಾಖೆಯಲ್ಲಿ ಮಂಜೂರಾದ ಹುದ್ದೆಗಳು, ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಗಳು ಹಾಗೂ ಖಾಲಿ ಹುದ್ದೆಯ ಸಂಖ್ಯೆಗಳ (ನೇರ ನೇಮಕಾತಿ ಹಾಗೂ ಮುಂಬಡ್ತಿ ಹುದ್ದೆಗಳನ್ನು ಒಳಗೊಂಡಂತೆ) ಆಯಾ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಇದರೊಂದಿಗೆ ಲಗತ್ತಿಸಲಾದ **ಅನುಬಂಧ-1ರ ಕಲಂ (06)** ರಲ್ಲಿ ನೀಡಿರುವಂತೆ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ.

ಈ ಹಿನ್ನೆಲೆಯಲ್ಲಿ, ಇದರೊಂದಿಗೆ ಲಗತ್ತಿಸಿದ **ಅನುಬಂಧ-2** ರಲ್ಲಿನ ಆಡಳಿತ ಸುಧಾರಣೆಯ ಆದೇಶ ಸಂಖ್ಯೆ: ಸಿಆಸುಇ 01 ಸೆಹಿಮೆ 2022 ದಿನಾಂಕ:28.12.2022 ಹಾಗೂ ಆದೇಶ ಸಂಖ್ಯೆ: ಸಿಆಸುಇ 02 ಸೆಹಿಮೆ 2023 ದಿನಾಂಕ:08.03.2023ರಲ್ಲಿ ಪ್ರಸ್ತಾಪಿಸಿರುವಂತೆ ನಿಯಮಾನುಸಾರ ಎಲ್ಲ ವರ್ಗಗಳಿಗೂ ಅನ್ವಯವಾಗುವಂತೆ (ಸಾಮಾನ್ಯ ವರ್ಗ, ಪ.ಜಾ/ಪ.ಪಂ...ಇತ್ಯಾದಿ) ಮೊದಲನೇ ಬಿಂದುವಿನಿಂದ ಸ್ಥಳೀಯ ಮೂಲ ವೃಂದ ಮತ್ತು ಕಲ್ಯಾಣ ಕರ್ನಾಟಕ ವೃಂದದ ಹುದ್ದೆಗಳಿಗೆ ಪ್ರತ್ಯೇಕವಾಗಿ ನೇರ ಮೀಸಲಾತಿ (Vertical Reservation) ಹಾಗೂ ಸಮತಳ ಮೀಸಲಾತಿಯನ್ನು (Horizontal Reservation) (ನೇರ ನೇಮಕಾತಿ ಹುದ್ದೆಗಳಿಗೆ) ತಃಖ್ತೆಯನ್ನು ಕೂಡಲೇ ಸಲ್ಲಿಸುವಂತೆ ತಮ್ಮನ್ನು ಕೋರಲು ನಿರ್ದೇಶಿತಳಾಗಿದ್ದೇನೆ.

ತಮ್ಮ ನಂಬುಗೆಯ,

**(ಕಲಾವತಿ ಎಸ್. ಎನ್.)**
ಸರ್ಕಾರದ ಉಪ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು-2, ಪು&ಪು ನಿರ್ಮಾಣ ಹಾಗೂ ಸಮನ್ವಯ ಶಾಖೆ)

# ಅನುಬಂಧ -1

## ಗ್ರಾಮ ಆಡಳಿತ ಅಧಿಕಾರಿಗಳ ವಿವರ

| ಕ್ರ.ಸಂ | ಜಿಲ್ಲೆ | ಮಂಜೂರಾದ ಹುದ್ದೆಗಳ ಸಂಖ್ಯೆ | ಭರ್ತಿಯಾದ ಹುದ್ದೆಗಳ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ | ಆರ್ಥಿಕ ಇಲಾಖೆಯು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸಹಮತಿಸಿರುವ 1000 ಹುದ್ದೆಗಳನ್ನು ಅನುಗುಣವಾಗಿ (Proportionate)ಜಿಲ್ಲಾ ವಾರು ನಿಗದಿ ಪಡಿಸಲಾಗಿರುವ ಹುದ್ದೆ |
|---|---|---|---|---|---|
| (1) | (2) | (3) | (4) | (5) | (6) |
| 1 | ಬೆಂಗಳೂರು ನಗರ | 251 | 195 | 56 | 31 |
| 2 | ಬೆಂಗಳೂರು ಗ್ರಾಮಾಂತರ | 223 | 162 | 61 | 34 |
| 3 | ಚಿತ್ರದುರ್ಗ | 356 | 299 | 57 | 31 |
| 4 | ದಾವಣಗೆರೆ | 266 | 266 | 00 | 00 |
| 5 | ಕೋಲಾರ | 305 | 226 | 79 | 43 |
| 6 | ತುಮಕೂರು | 648 | 518 | 130 | 71 |
| 7 | ರಾಮನಗರ | 275 | 182 | 93 | 51 |
| 8 | ಚಿಕ್ಕಬಳ್ಳಾಪುರ | 289 | 214 | 75 | 41 |
| 9 | ಶಿವಮೊಗ್ಗ | 376 | 321 | 55 | 30 |
| 10 | ಮೈಸೂರು | 477 | 365 | 112 | 62 |
| 11 | ಚಾಮರಾಜನಗರ | 258 | 159 | 99 | 54 |
| 12 | ಮಂಡ್ಯ | 474 | 366 | 108 | 59 |
| 13 | ಹಾಸನ | 459 | 363 | 96 | 53 |
| 14 | ಚಿಕ್ಕಮಗಳೂರು | 291 | 250 | 41 | 23 |
| 15 | ಕೊಡಗು | 131 | 121 | 10 | 6 |
| 16 | ಉಡುಪಿ | 215 | 174 | 41 | 23 |
| 17 | ದಕ್ಷಿಣ ಕನ್ನಡ | 325 | 235 | 90 | 49 |
| 18 | ಬೆಳಗಾವಿ | 649 | 536 | 113 | 62 |
| 19 | ವಿಜಯಪುರ | 274 | 262 | 12 | 7 |
| 20 | ಬಾಗಲಕೋಟೆ | 297 | 251 | 46 | 25 |
| 21 | ಧಾರವಾಡ | 235 | 205 | 30 | 16 |
| 22 | ಗದಗ | 232 | 178 | 54 | 30 |
| 23 | ಹಾವೇರಿ | 295 | 236 | 59 | 32 |
| 24 | ಉತ್ತರ ಕನ್ನಡ | 337 | 322 | 15 | 8 |
| 25 | ಕಲಬುರಗಿ | 410 | 290 | 120 | 66 |
| 26 | ರಾಯಚೂರು | 324 | 310 | 14 | 8 |
| 27 | ಕೊಪ್ಪಳ | 193 | 159 | 34 | 19 |
| 28 | ಬಳ್ಳಾರಿ | 226 | 192 | 34 | 19 |
| 29 | ಬೀದರ್ | 344 | 300 | 44 | 24 |
| 30 | ಯಾದಗಿರಿ | 200 | 182 | 18 | 10 |
| 31 | ವಿಜಯನಗರ | 202 | 178 | 24 | 13 |
| | **ಒಟ್ಟು** | **9837** | **8017** | **1820** | **1000** |

ಅನುಬಂಧ - 2

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಯಲ್ಲಿ ಭಾರತ ಸಂವಿಧಾನದ ಅನುಚ್ಛೇದ 16(4)ರ ಅನ್ವಯ ಮೀಸಲಾತಿ ಕಲ್ಪಿಸುವ ಬಗ್ಗೆ.

ಓದಲಾಗಿದೆ:

(1) ದಿನಾಂಕ: 31.01.1995ರ ಸರ್ಕಾರದ ಆದೇಶ ಸಂಖ್ಯೆ: ಸಕಇ 251 ಬಿಸಿಎ 94.
(2) ದಿನಾಂಕ: 20.06.1995ರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 8 ಸೆಹಿಮ 95.
(3) ದಿನಾಂಕ: 23.10.2022ರ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 29 ಶಾಸನ 2022.
(4) ದಿನಾಂಕ: 31.10.2022ರ ಅಧಿಸೂಚನೆ ಸಂಖ್ಯೆ: ಸಕಇ 84 ಎಸ್‌ಟಿಪಿ 2021.

**ಪ್ರಸ್ತಾವನೆ:**

ಮೇಲೆ (1) ರಲ್ಲಿ ಓದಲಾದ ದಿನಾಂಕ: 31.01.1995ರ ಸರ್ಕಾರದ ಆದೇಶದಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮತ್ತು ಸರ್ಕಾರದ ಅಧೀನದಲ್ಲಿ ಬರುವ ಅಂಗ ಸಂಸ್ಥೆಗಳಲ್ಲಿನ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಯಲ್ಲಿ ಹಿಂದುಳಿದ ವರ್ಗದವರಿಗೆ ಮೀಸಲಿಡಬಹುದಾದ ಮೀಸಲಾತಿ ಪ್ರಮಾಣವನ್ನು ಶೇಕಡಾ 50ಕ್ಕೆ ನಿಗದಿಪಡಿಸಲಾಯಿತು. ಈ ಹಿನ್ನೆಲೆಯಲ್ಲಿ, ಭಾರತ ಸಂವಿಧಾನದ ಅನುಚ್ಛೇದ 16(4) ರ ಪ್ರಕಾರ ಸದರಿ ಮೀಸಲಾತಿಯನ್ನು ಜಾರಿಗೊಳಿಸಲು ಅಳವಡಿಸಬೇಕಾದ ರೋಸ್ಟರ್ ಬಗ್ಗೆ ಪರಿಶೀಲಿಸಿ, ಮೇಲೆ (2) ರಲ್ಲಿ ಓದಲಾದ ದಿನಾಂಕ: 20.06.1995ರ ಸರ್ಕಾರದ ಆದೇಶದ ಅನುಬಂಧ-1 ರಲ್ಲಿ 100 ಬಿಂದುಗಳ ಒಂದು ರೋಸ್ಟರನ್ನು ನಿಗದಿಪಡಿಸಲಾಯಿತು. ಸದರಿ ರೋಸ್ಟರಿನಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರ ಹಿಂದುಳಿದ ವರ್ಗಗಳಿಗಾಗಿ ನಿಗದಿಪಡಿಸಿದ ಮೀಸಲಾತಿ ಪ್ರಮಾಣಕ್ಕೆ ಅನುಗುಣವಾಗಿ ಭರ್ತಿ ಮಾಡಬೇಕಾದ ರಿಕ್ತಸ್ಥಾನಗಳಿಗೆ ಬಿಂದುಗಳನ್ನು ಗೊತ್ತುಪಡಿಸಲಾಗಿರುತ್ತದೆ.

2. ಮೇಲೆ (3)ರಲ್ಲಿ ಓದಲಾದ ದಿನಾಂಕ: 23.10.2022ರ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ



28-12-2022

ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಅಧ್ಯಾದೇಶ, 2022ನ್ನು ಹೊರಡಿಸಲಾಗಿರುತ್ತದೆ. ಮೇಲೆ (4)ರಲ್ಲಿ ಓದಲಾದ ದಿನಾಂಕ: 31.10.2022ರ ಅಧಿಸೂಚನೆ ಸಂಖ್ಯೆ. ಸಕಇ 84 ಎಸ್‌ಟಿಪಿ 2021 ರಲ್ಲಿ, ಸದರಿ ಅಧ್ಯಾದೇಶದ 1ನೇ ಪ್ರಕರಣದ (2)ನೇ ಉಪ ಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅಧ್ಯಾದೇಶದಲ್ಲಿನ ಎಲ್ಲಾ ಉಪಬಂಧಗಳು ದಿನಾಂಕ: 01.11.2022 ರಿಂದ ಜಾರಿಗೆ ಬರತಕ್ಕದ್ದೆಂದು ಗೊತ್ತುಪಡಿಸಲಾಗಿರುತ್ತದೆ.

3. ಸದರಿ ಅಧ್ಯಾದೇಶ, 2022ರ 4ನೇ ಪ್ರಕರಣದಲ್ಲಿ, ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವುದನ್ನು ಗಮನದಲ್ಲಿರಿಸಿಕೊಂಡು ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಿಗೆ ಸಂಬಂಧಿಸಿದಂತೆ ಮೀಸಲಾತಿಯನ್ನು ಶೇಕಡ 15 ರಿಂದ ಶೇಕಡ 17 ರಷ್ಟಕ್ಕೆ ಹಾಗೂ ಶೇಕಡ 3 ರಿಂದ ಶೇಕಡ 7ರಷ್ಟಕ್ಕೆ ಅನುಕ್ರಮವಾಗಿ ಹೆಚ್ಚಿಸಲಾಗಿರುತ್ತದೆ.

4. ಮೇಲೆ ವಿವರಿಸಿದ ಸಂದರ್ಭಗಳ ಹಿನ್ನೆಲೆಯಲ್ಲಿ, ದಿನಾಂಕ: 20.06.1995ರ ಸರ್ಕಾರದ ಆದೇಶದ ಅನುಬಂಧ-1 ರಲ್ಲಿ ನಿಗದಿಪಡಿಸಿರುವ ರೋಸ್ಟರನ್ನು ಮಾರ್ಪಡಿಸುವ ಸಂದರ್ಭ ಒದಗಿ ಬಂದಿರುತ್ತದೆ. ಅದರಂತೆ, ಈ ಕೆಳಕಂಡ ಆದೇಶ.

**<u>ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 01 ಸೆಹಿಮ 2022, ಬೆಂಗಳೂರು, ದಿನಾಂಕ: 28.12.2022</u>**

5. ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ದಿನಾಂಕ: 23.10.2022ರ ಅಧಿಸೂಚನೆಯಲ್ಲಿ ಹೊರಡಿಸಲಾದ ಅಧ್ಯಾದೇಶದಲ್ಲಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ನೇಮಕಾತಿಯಲ್ಲಿ ನಿಗದಿಪಡಿಸಲಾದ ಹೆಚ್ಚಿನ ಮೀಸಲಾತಿ ಪ್ರಮಾಣಕ್ಕೆ ಅನುಗುಣವಾಗಿ ನೇರ ನೇಮಕಾತಿ ಮುಖಾಂತರ ಭರ್ತಿಮಾಡಬೇಕಾದ ರಿಕ್ತಸ್ಥಾನಗಳಿಗೆ ಬಿಂದುಗಳನ್ನು ಗುರುತಿಸಿ, ದಿನಾಂಕ: 20.06.1995ರ ಸರ್ಕಾರದ ಆದೇಶದ ಅನುಬಂಧ-1 ರಲ್ಲಿನ 100 ಬಿಂದುಗಳ ರೋಸ್ಟರನ್ನು ಈ ಆದೇಶದ ಅನುಬಂಧದಲ್ಲಿರುವ ಪರಿಷ್ಕೃತ ರೋಸ್ಟರಿಂದ ಪ್ರತಿಸ್ಥಾಪಿಸಲಾಗಿದೆ.

6. ಉಳಿದಂತೆ, ದಿನಾಂಕ: 20.06.1995ರ ಸರ್ಕಾರದ ಆದೇಶದಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

..3..

28-12-2022

7. ಈ ಆದೇಶವು ತಕ್ಷಣದಿಂದ ಜಾರಿಗೆ ಬರುತ್ತದೆ. ಆದರೆ, ಯಾವುದೇ ವೃಂದದ ಹುದ್ದೆಗಳಿಗೆ ಈಗಾಗಲೇ ನೇರ ನೇಮಕಾತಿ ಪ್ರಕ್ರಿಯೆಯು ಪ್ರಾರಂಭಗೊಂಡಿದ್ದು, ಆ ನೇಮಕಾತಿ ಪ್ರಕ್ರಿಯೆಯು ಈ ಆದೇಶದ ದಿನಾಂಕದಂದು ಬಾಕಿ ಇದ್ದಲ್ಲಿ, ಅಂತಹ ನೇರ ನೇಮಕಾತಿ ಪ್ರಕ್ರಿಯೆಯನ್ನು ದಿನಾಂಕ: 20.06.1995ರ ಸರ್ಕಾರದ ಆದೇಶದ ಅನುಬಂಧ-1 ರಲ್ಲಿ ಗೊತ್ತುಪಡಿಸಿದ ರೋಸ್ಟರನ್ನು ಅನುಸರಿಸಿ ಪೂರ್ಣಗೊಳಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

28-12-2022
(ವೀರಭದ್ರ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು-1).

29/12/22

ಇವರಿಗೆ:
ಸಂಕಲನಕಾರರು, ಇ-ರಾಜ್ಯಪತ್ರ

ಪ್ರತಿ:
1. ಪ್ರಧಾನ ಮಹಾಲೇಖಪಾಲರು, (ಜಿ&ಎಸ್‌ಎಸ್‌ಎ), (ಇ &ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿಯವರು.
4. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರು.
5. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಯವರು/ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
6. *ನಿವಾಸಿ ಆಯುಕ್ತರು, ಕರ್ನಾಟಕ ಭವನ, ಕೌಟಿಲ್ಯ ಮಾರ್ಗ, ನವದೆಹಲಿ.
7. *ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ ವಿಧಾನ ಪರಿಷತ್ತು, ಬೆಂಗಳೂರು.
8. *ಮಹಾನಿಬಂಧಕರು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
9. *ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು.
10. *ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು
11. *ನಿಬಂಧಕರು, ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, 6 ಮತ್ತು 7ನೇ ಮಹಡಿ, ಕಂದಾಯ ಭವನ, ಕೆ.ಜಿ. ರಸ್ತೆ, ಬೆಂಗಳೂರು-560009.
12. *ನಿಬಂಧಕರು, ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣ, ಬಹುಮಹಡಿ ಕಟ್ಟಡ, ಬೆಂಗಳೂರು.
13. ಎಲ್ಲಾ ಇಲಾಖಾ ಮುಖ್ಯಸ್ಥರು
14. ಎಲ್ಲಾ ಪ್ರಾದೇಶಿಕ ಆಯುಕ್ತರು/ ಜಿಲ್ಲಾಧಿಕಾರಿಗಳು/ ಮುಖ್ಯ ಕಾರ್ಯನಿರ್ವಾಹಣಾ ಅಧಿಕಾರಿಗಳು, ಜಿಲ್ಲಾ ಪಂಚಾಯತ್.
15. ಎಲ್ಲಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು.
16. ಸರ್ಕಾರದ ಜಂಟಿ ಕಾರ್ಯದರ್ಶಿ (ಸಚಿವ ಸಂಪುಟ) (ವಿಷಯ ಸಂಖ್ಯೆ:713/2022)
17. ಸರ್ಕಾರದ ಎಲ್ಲಾ ವಿಶೇಷ/ ಅಪರ/ ಜಂಟಿ/ ಉಪ/ ಅಧೀನ ಕಾರ್ಯದರ್ಶಿಗಳು
18. ಶಾಖಾ ರಕ್ಷಾ ಕಡತ/ ಅಧಿಕ ಪ್ರತಿಗಳು
(*ಮುಖಪತ್ರದೊಂದಿಗೆ)

28-12-2022

## ಅನುಬಂಧ

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 01 ಸೆಹಿಮ 2022 ದಿನಾಂಕ: 28.12.2022

| | | | | | | | |
|---|---|---|---|---|---|---|---|
| 01 | **ಪ.ಜಾ.** | 26 | ಸಾ.ಅ. | 51 | ಪ್ರವರ್ಗ-II(ಎ) | 76 | ಸಾ.ಅ. |
| 02 | ಸಾ.ಅ. | 27 | **ಪ.ಜಾ.** | 52 | ಸಾ.ಅ. | 77 | ಪ್ರವರ್ಗ-II(ಎ) |
| 03 | ಪ.ಪಂ | 28 | ಸಾ.ಅ. | 53 | **ಪ.ಜಾ.** | 78 | ಪ.ಪಂ. |
| 04 | ಸಾ.ಅ. | 29 | ಪ್ರವರ್ಗ-II(ಎ) | 54 | ಸಾ.ಅ. | 79 | ಪ್ರವರ್ಗ-I |
| 05 | ಪ್ರವರ್ಗ-I | 30 | ಸಾ.ಅ. | 55 | ಪ್ರವರ್ಗ-II(ಎ) | 80 | ಸಾ.ಅ. |
| 06 | ಸಾ.ಅ. | 31 | ಪ್ರವರ್ಗ-I | 56 | ಸಾ.ಅ. | 81 | **ಪ.ಜಾ.** |
| 07 | ಪ್ರವರ್ಗ-II(ಎ) | 32 | ಪ.ಪಂ | 57 | ಪ್ರವರ್ಗ-I | 82 | ಸಾ.ಅ. |
| 08 | ಸಾ.ಅ. | 33 | **ಪ.ಜಾ.** | 58 | ಸಾ.ಅ. | 83 | ಪ್ರವರ್ಗ-III(ಬಿ) |
| 09 | **ಪ.ಜಾ.** | 34 | ಸಾ.ಅ. | 59 | **ಪ.ಜಾ.** | 84 | ಸಾ.ಅ. |
| 10 | ಸಾ.ಅ. | 35 | ಪ್ರವರ್ಗ-II(ಬಿ) | 60 | ಸಾ.ಅ. | 85 | ಪ್ರವರ್ಗ-II(ಎ) |
| 11 | ಪ್ರವರ್ಗ-II(ಬಿ) | 36 | ಸಾ.ಅ. | 61 | ಪ್ರವರ್ಗ-II(ಬಿ) | 86 | ಸಾ.ಅ. |
| 12 | ಸಾ.ಅ. | 37 | ಪ್ರವರ್ಗ-II(ಎ) | 62 | ಪ.ಪಂ. | 87 | ಪ್ರವರ್ಗ-II(ಬಿ) |
| 13 | ಪ್ರವರ್ಗ-II(ಎ) | 38 | ಸಾ.ಅ. | 63 | ಪ್ರವರ್ಗ-II(ಎ) | 88 | ಸಾ.ಅ. |
| 14 | ಸಾ.ಅ. | 39 | ಪ.ಪಂ | 64 | ಸಾ.ಅ. | 89 | **ಪ.ಜಾ.** |
| 15 | **ಪ.ಜಾ.** | 40 | ಸಾ.ಅ. | 65 | ಪ್ರವರ್ಗ-III(ಬಿ) | 90 | ಸಾ.ಅ. |
| 16 | ಸಾ.ಅ. | 41 | **ಪ.ಜಾ.** | 66 | ಸಾ.ಅ. | 91 | ಪ್ರವರ್ಗ-II(ಎ) |
| 17 | ಪ್ರವರ್ಗ-III(ಎ) | 42 | ಸಾ.ಅ. | 67 | **ಪ.ಜಾ.** | 92 | ಸಾ.ಅ. |
| 18 | ಪ.ಪಂ | 43 | ಪ್ರವರ್ಗ-III(ಬಿ) | 68 | ಸಾ.ಅ. | 93 | **ಪ.ಜಾ.** |
| 19 | ಪ್ರವರ್ಗ-III(ಬಿ) | 44 | ಸಾ.ಅ. | 69 | ಪ್ರವರ್ಗ-II(ಎ) | 94 | ಸಾ.ಅ. |
| 20 | ಸಾ.ಅ. | 45 | ಪ್ರವರ್ಗ-II(ಎ) | 70 | ಸಾ.ಅ. | 95 | ಪ್ರವರ್ಗ-III(ಎ) |
| 21 | ಪ್ರವರ್ಗ-II(ಎ) | 46 | **ಪ.ಜಾ.** | 71 | ಪ.ಪಂ | **96** | **ಪ.ಜಾ.** |
| 22 | ಸಾ.ಅ. | 47 | ಪ್ರವರ್ಗ-III(ಎ) | 72 | ಸಾ.ಅ. | 97 | ಪ್ರವರ್ಗ-II(ಎ) |
| 23 | **ಪ.ಜಾ.** | 48 | ಸಾ.ಅ. | 73 | ಪ್ರವರ್ಗ-III(ಎ) | 98 | ಸಾ.ಅ. |
| 24 | ಸಾ.ಅ. | 49 | **ಪ.ಜಾ.** | 74 | ಸಾ.ಅ. | 99 | ಪ್ರವರ್ಗ-III(ಬಿ) |
| 25 | ಪ್ರವರ್ಗ-II(ಎ) | 50 | ಸಾ.ಅ. | 75 | **ಪ.ಜಾ.** | 100 | ಸಾ.ಅ. |

28-12-2022

# ಸ್ಪಷ್ಟೀಕರಣ

| | | ಶೇಕಡವಾರು ಮೀಸಲಾತಿ |
|---|---|---|
| I | ಪ್ರವರ್ಗ- I | 4 |
| II(ಎ) | ಪ್ರವರ್ಗ- II(ಎ) | 15 |
| II(ಬಿ) | ಪ್ರವರ್ಗ-II(ಬಿ) | 4 |
| III(ಎ) | ಪ್ರವರ್ಗ- III(ಎ) | 4 |
| III(ಬಿ) | ಪ್ರವರ್ಗ-III(ಬಿ) | 5 |
| ಪ.ಜಾ. | ಪರಿಶಿಷ್ಟ ಜಾತಿ | 17 |
| ಪ.ಪಂ. | ಪರಿಶಿಷ್ಟ ಪಂಗಡ | 7 |
| ಸಾ.ಅ. | ಸಾಮಾನ್ಯ ಅರ್ಹತೆ | 44 |
| | ಒಟ್ಟು | 100 |

28-12-2022

ಅನುಬಂಧ -೨

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಯಲ್ಲಿ ಕಲ್ಪಿಸಿರುವ ವಿವಿಧ ಸಮತಳ ಮೀಸಲಾತಿಗಳನ್ನುಅನುಷ್ಠಾನಗೊಳಿಸಲು ರೋಸ್ಟರನ್ನು ನಿಗದಿಪಡಿಸುವ ಬಗ್ಗೆ.

ಓದಲಾಗಿದೆ:

(1) ದಿನಾಂಕ: 20.06.1995ರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 8 ಸೆಹಿಮ 95.
(2) ದಿನಾಂಕ: 22.11.2002ರ ಸರ್ಕಾರದ ಆದೇಶ ಸಂಖ್ಯೆ. ಸಿಆಸುಇ 97 ಸೇನೆನಿ 2002.
(3) ದಿನಾಂಕ: 04.01.2008ರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 53 ಸೇನೆನಿ 2007.
(4) ದಿನಾಂಕ: 08.01.2016ರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 143 ಸೇನೆನಿ 2015.
(5) ದಿನಾಂಕ: 25.09.2020ರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 149 ಸೇನೆನಿ 2020.
(6) ದಿನಾಂಕ: 14.07.2021ರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 179 ಸೇನೆನಿ 2020.
(7) ದಿನಾಂಕ: 23.10.2022ರ ಸರ್ಕಾರದ ಅಧಿಸೂಚನೆ ಸಂಖ್ಯೆ ಸಂವ್ಯಶಾಇ 29 ಶಾಸನ 2022.
(8) ದಿನಾಂಕ 28.12.2022ರ ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 01 ಸೆಹಿಮ 2022.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ದಿನಾಂಕ: 20.06.1995ರ ಸರ್ಕಾರದ ಆದೇಶದಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಗಳಲ್ಲಿ ಭಾರತ ಸಂವಿಧಾನದ ಅನುಚ್ಛೇದ 16(4) ರ ಪ್ರಕಾರ ಅಳವಡಿಸಿಕೊಳ್ಳಬೇಕಾದ ಮೀಸಲಾತಿ ವಿಧಾನ ಮತ್ತು ಅದನ್ನು ಅನುಷ್ಠಾನಗೊಳಿಸಲು ಅನುಸರಿಸಬೇಕಾದ 100 ಬಿಂದುಗಳ ಒಂದು ರೋಸ್ಟರನ್ನು ನಿಗದಿಪಡಿಸಲಾಗಿರುತ್ತದೆ.

2. ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಯಲ್ಲಿ ನೇರ ಮೀಸಲಾತಿ (vertical reservation)ಯ ಜೊತೆಗೆ ಈ ಕೆಳಕಂಡಂತೆ ಸಮತಳ ಮೀಸಲಾತಿಗಳ (horizontal reservation) ಆಸ್ಪದವನ್ನು ಮೇಲೆ (2), (3), (4), (5) ಮತ್ತು (6)ರಲ್ಲಿ ಓದಲಾದ ಸರ್ಕಾರದ ಆದೇಶಗಳಲ್ಲಿ ನಿಗದಿಪಡಿಸಿ ಆದೇಶಿಸಲಾಗಿರುತ್ತದೆ :-

..2..

8-3-2023

| ಕ್ರ. ಸಂ. | ಸಮತಳ ಮೀಸಲಾತಿಯ ವರ್ಗ | ಸಮತಳ ಮೀಸಲಾತಿಯ ಶೇಕಡವಾರು | ಸಮತಳ ಮೀಸಲಾತಿಯ ಆಸ್ಪದವನ್ನು ಕಲ್ಪಿಸಿರುವ ನಿಯಮ / ಅಧಿನಿಯಮ |
|---|---|---|---|
| (1) | (2) | (3) | (4) |
| 1 | ಮಾಜಿ ಸೈನಿಕರು | ಗ್ರೂಪ್-ಎ, ಗ್ರೂಪ್-ಬಿ, ಗ್ರೂಪ್-ಸಿ ಮತ್ತು ಗ್ರೂಪ್-ಡಿ ಹುದ್ದೆಗಳಿಗೆ ಮಾಡುವ ಎಲ್ಲಾ ನೇರ ನೇಮಕಾತಿಯಲ್ಲಿ ಶೇಕಡಾ 10 ರಷ್ಟು | ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 9ರ ಉಪ ನಿಯಮ (1) |
| 2 | ಅಂಗವೈಕಲ್ಯವನ್ನುಳ್ಳ ವ್ಯಕ್ತಿಗಳು (persons with disabilities) | 1. ಗ್ರೂಪ್-ಸಿ ಮತ್ತು ಗ್ರೂಪ್-ಡಿ ಹುದ್ದೆಗಳಿಗೆ ಮಾಡುವ ಎಲ್ಲಾ ನೇರ ನೇಮಕಾತಿಯಲ್ಲಿ ಶೇಕಡಾ 5 ರಷ್ಟು.<br>2. ಗ್ರೂಪ್-ಎ ಮತ್ತು ಗ್ರೂಪ್-ಬಿ ಹುದ್ದೆಗಳಿಗೆ ಮಾಡುವ ಎಲ್ಲಾ ನೇರ ನೇಮಕಾತಿಯಲ್ಲಿ ಶೇಕಡಾ 4 ರಷ್ಟು. | 1977ರ ನಿಯಮಗಳ ನಿಯಮ 9ರ ಉಪ ನಿಯಮ (1ಎ). |
| 3 | ಯೋಜನೆಗಳಿಂದ ನಿರ್ವಸಿತರಾದವರು | ಗ್ರೂಪ್-ಸಿ ಮತ್ತು ಗ್ರೂಪ್-ಡಿ ಹುದ್ದೆಗಳಿಗೆ ಮಾಡುವ ಎಲ್ಲಾ ನೇರ ನೇಮಕಾತಿಯಲ್ಲಿ ಶೇಕಡಾ 5 ರಷ್ಟು | 1977ರ ನಿಯಮಗಳ ನಿಯಮ 9 ರ ಉಪ ನಿಯಮ (1ಎಎ) |
| 4 | ಮಹಿಳೆಯರು | ಗ್ರೂಪ್-ಎ, ಗ್ರೂಪ್ –ಬಿ, ಗ್ರೂಪ್-ಸಿ ಮತ್ತು ಗ್ರೂಪ್-ಡಿ ಹುದ್ದೆಗಳಿಗೆ ಮಾಡುವ ಎಲ್ಲಾ ನೇರ ನೇಮಕಾತಿಯಲ್ಲಿ ಶೇಕಡಾ 33 ರಷ್ಟು. | 1977ರ ನಿಯಮಗಳ ನಿಯಮ 9ರ ಉಪ ನಿಯಮ (1ಬಿ). |
| 5 | ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳು. | ಗ್ರೂಪ್-ಎ, ಗ್ರೂಪ್-ಬಿ, ಗ್ರೂಪ್-ಸಿ ಮತ್ತು ಗ್ರೂಪ್-ಡಿ ಹುದ್ದೆಗಳಿಗೆ ಮಾಡುವ ಎಲ್ಲಾ ನೇರ ನೇಮಕಾತಿಯಲ್ಲಿ ಶೇಕಡಾ 5 ರಷ್ಟು. | 1977ರ ನಿಯಮಗಳ ನಿಯಮ 9ರ ಉಪ ನಿಯಮ (1ಸಿ). |

8-3-2023

| | | | |
|---|---|---|---|
| 6 | ತೃತೀಯ ಲಿಂಗಿಗಳು | ಗ್ರೂಪ್-ಎ, ಗ್ರೂಪ್-ಬಿ, ಗ್ರೂಪ್-ಸಿ ಮತ್ತು ಗ್ರೂಪ್-ಡಿ ಹುದ್ದೆಗಳಿಗೆ ಮಾಡುವ ಎಲ್ಲಾ ನೇರ ನೇಮಕಾತಿಯಲ್ಲಿ ಶೇಕಡಾ 1 ರಷ್ಟು. | 1977ರ ನಿಯಮಗಳ ನಿಯಮ 9ರ ಉಪ ನಿಯಮ (1ಡಿ) |
| 7 | ಗ್ರಾಮೀಣ ಅಭ್ಯರ್ಥಿಗಳು. | ಗ್ರೂಪ್-ಎ, ಗ್ರೂಪ್-ಬಿ, ಗ್ರೂಪ್-ಸಿ ಮತ್ತು ಗ್ರೂಪ್-ಡಿ ಹುದ್ದೆಗಳಿಗೆ ಮಾಡುವ ಎಲ್ಲಾ ನೇರ ನೇಮಕಾತಿಯಲ್ಲಿ ಶೇಕಡಾ 25 ರಷ್ಟು. | ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ (ರಾಜ್ಯ ಸಿವಿಲ್ ಸೇವೆಗಳಲ್ಲಿ) ನೇಮಕಾತಿಗಳ ಅಥವಾ ಹುದ್ದೆಗಳ ಮೀಸಲಾತಿ ಅಧಿನಿಯಮ, 2000. |

3. ಮೇಲೆ (7)ರಲ್ಲಿ ಓದಲಾದ ದಿನಾಂಕ: 23.10.2022ರ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಅಧ್ಯಾದೇಶ, 2022ನ್ನು ಹೊರಡಿಸಲಾಗಿದ್ದು, ಈ ಅಧ್ಯಾದೇಶವು ದಿನಾಂಕ: 01.11.2022ರಿಂದ ಜಾರಿಗೆ ಬಂದಿರುತ್ತದೆ. ಈ ಅಧ್ಯಾದೇಶದಲ್ಲಿ ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಿಗೆ ಸಂಬಂಧಿಸಿದಂತೆ ಮೀಸಲಾತಿಯನ್ನು ಶೇಕಡ 15 ರಿಂದ ಶೇಕಡ 17 ಕ್ಕೆ ಹಾಗೂ ಶೇಕಡ 3 ರಿಂದ ಶೇಕಡ 7 ಕ್ಕೆ ಅನುಕ್ರಮವಾಗಿ ಹೆಚ್ಚಿಸಲಾಗಿರುತ್ತದೆ.

4. ಸದರಿ ಅಧ್ಯಾದೇಶದಲ್ಲಿ ಪರಿಷ್ಕರಿಸಿದ ಮೀಸಲಾತಿ ಪ್ರಮಾಣದ ಹಿನ್ನೆಲೆಯಲ್ಲಿ, ಮೇಲೆ (1) ರಲ್ಲಿ ಓದಲಾದ, ದಿನಾಂಕ 20.06.1995ರ ಆದೇಶದಲ್ಲಿ ನಿಗದಿಪಡಿಸಿದ್ದ ರೋಸ್ಟರನ್ನು ಪರಿಷ್ಕರಿಸಿ, ಮೇಲೆ (8) ರಲ್ಲಿ ಓದಲಾದ ದಿನಾಂಕ: 28.12.2022 ಆದೇಶದಲ್ಲಿ ಮಾರ್ಪಡಿಸಿದ ರೋಸ್ಟರನ್ನು ಗೊತ್ತುಪಡಿಸಲಾಗಿದೆ.

5. ಮೇಲೆ ವಿವರಿಸಿದ ಹಿನ್ನೆಲೆಯಲ್ಲಿ, ಮೇಲೆ (2) ಮತ್ತು (3)ರಲ್ಲಿ ಓದಲಾದ ದಿನಾಂಕ: 22.11.2002 ಮತ್ತು ದಿನಾಂಕ: 4.1.2008ರ ಸರ್ಕಾರಿ ಆದೇಶದ **ಅನುಬಂಧದಲ್ಲಿ**

..4..

8-3-2023

ನಿಗದಿಪಡಿಸಿರುವ 20 ಬಿಂದುಗಳ ರೋಸ್ಟರಿನ ಬದಲಾಗಿ ಕ್ರೋಢೀಕೃತ 100 ಬಿಂದುಗಳ ರೋಸ್ಟರನ್ನು ನಿಗದಿಪಡಿಸಲು ಈ ಕೆಳಕಂಡ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 02 ಸೇಹಿಮ 2023,**

**ಬೆಂಗಳೂರು, ದಿನಾಂಕ: 08.03.2023**

6. ಪ್ರಸ್ತಾವನೆಯಲ್ಲಿ ವಿವರಿಸಲಾದ ಹಿನ್ನೆಲೆಯಲ್ಲಿ, ಮೇಲೆ (2) ಮತ್ತು (3)ರಲ್ಲಿ ಓದಲಾದ ದಿನಾಂಕ: 22.11.2002 ಮತ್ತು ದಿನಾಂಕ: 4.1.2008ರ ಆದೇಶಗಳ **ಅನುಬಂಧ**ದಲ್ಲಿ ಪ್ರತಿ ನೇರ ಮೀಸಲಾತಿ ಪ್ರವರ್ಗದಡಿ (under each category of vertical reservation) ನಿಗದಿಪಡಿಸಿರುವ 20 ಬಿಂದುಗಳ ರೋಸ್ಟರನ್ನು, ಈ ಆದೇಶದ **ಅನುಬಂಧ**ದಲ್ಲಿರುವ 100 ಬಿಂದುಗಳ ಕ್ರೋಢೀಕೃತ ರೋಸ್ಟರಿಂದ ಈ ಮೂಲಕ ಪ್ರತಿಸ್ಥಾಪಿಸಲಾಗಿದೆ. **ಪ್ರತಿ ನೇರ ನೇಮಕಾತಿ ಮೀಸಲಾತಿ ಪ್ರವರ್ಗದಡಿ (under each category of vertical reservation) ಪ್ರತ್ಯೇಕವಾಗಿ ಸಮತಳ ಮೀಸಲಾತಿಯನ್ನು ಅನುಸರಿಸಲು ಸದರಿ ರೋಸ್ಟರಿನಲ್ಲಿ ಅವಕಾಶವನ್ನು ಕಲ್ಪಿಸಲಾಗಿದೆ.**

7. ನೇರ ನೇಮಕಾತಿಯ ಪ್ರತಿ ಸಂದರ್ಭದಲ್ಲಿ, ನೇರ ನೇಮಕಾತಿಗೆ ಲಭ್ಯವಾಗುವ ರಿಕ್ತಸ್ಥಾನಗಳಲ್ಲಿ ನೇರ ಮೀಸಲಾತಿ (vertical reservation)ಗೆ ಸಂಬಂಧಿಸಿದ, ಮೇಲೆ (4)ರಲ್ಲಿ ಓದಲಾದ ದಿನಾಂಕ: 28.12.2022ರ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 1 ಸೇಹಿಮ 2022 ರನ್ವಯ ರಿಕ್ತಸ್ಥಾನಗಳನ್ನು ಸಾಮಾನ್ಯ ಅರ್ಹತೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರ ಹಿಂದುಳಿದ ವರ್ಗಗಳಾದ ಪ್ರವರ್ಗ-I , ಪ್ರವರ್ಗ-IIಎ , ಪ್ರವರ್ಗ-IIಬಿ, ಪ್ರವರ್ಗ-IIIಎ ಹಾಗೂ ಪ್ರವರ್ಗ-IIIಬಿ ಈ ವರ್ಗಗಳಿಗಾಗಿ ವಿಂಗಡಿಸಿಕೊಂಡು, ಈ ಪ್ರತಿಯೊಂದು ವರ್ಗಕ್ಕೆ ಪ್ರತ್ಯೇಕವಾಗಿ ಲಭ್ಯವಾಗುವ ರಿಕ್ತಸ್ಥಾನಗಳ ಸಮೂಹದಲ್ಲಿ, ಈ ಆದೇಶದ **ಅನುಬಂಧದಲ್ಲಿ** ಗೊತ್ತುಪಡಿಸಲಾದ 100 ಬಿಂದುಗಳ ರೋಸ್ಟರಿನಲ್ಲಿ ಮಾಜಿ ಸೈನಿಕರಿಗೆ, ಅಂಗವೈಕಲ್ಯವನ್ನುಳ್ಳ ವ್ಯಕ್ತಿಗಳಿಗೆ, ಯೋಜನೆಗಳಿಂದ ನಿರ್ವಸಿತರಾದವರಿಗೆ, ಮಹಿಳೆಯರಿಗೆ, ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳಿಗೆ, ತೃತೀಯ ಲಿಂಗಿಗಳಿಗೆ ಹಾಗೂ ಗ್ರಾಮೀಣ ಅಭ್ಯರ್ಥಿಗಳಿಗೆ ಗುರುತಿಸಿರುವ ಸ್ಥಾನಗಳನ್ನು ಸಮತಳ ಮೀಸಲಾತಿಯ ಪ್ರತಿಯೊಂದು ವರ್ಗಕ್ಕಾಗಿ ಗುರುತಿಸತಕ್ಕದ್ದು.

..5..

8-3-2023

8. ನೇರ ನೇಮಕಾತಿಯ ಸಂದರ್ಭದಲ್ಲಿ, ಅಧಿಸೂಚಿಸಿದ ಅಂಗವೈಕಲ್ಯವನ್ನುಳ್ಳ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಅಂತಹ ರಿಕ್ತಸ್ಥಾನಗಳನ್ನು ಮುಂದಿನ ನೇಮಕಾತಿಗೆ ಮುಂದಕ್ಕೊಯ್ಯತಕ್ಕದ್ದು. ಮುಂದಿನ ನೇಮಕಾತಿಯಲ್ಲಿಯೂ, ಅಧಿಸೂಚಿತ ಅಂಗವೈಕಲ್ಯವನ್ನುಳ್ಳ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ, ಆಯಾ ಪ್ರವರ್ಗದ ಇತರ ಅಂಗವೈಕಲ್ಯವನ್ನುಳ್ಳ ಅಭ್ಯರ್ಥಿಗಳಿಂದ ಭರ್ತಿ ಮಾಡತಕ್ಕದ್ದು. ಒಂದು ವೇಳೆ, ಯಾವುದೇ ಅಂಗವೈಕಲ್ಯವನ್ನುಳ್ಳ ಅಭ್ಯರ್ಥಿಗಳು ಲಭ್ಯರಾಗದಿದ್ದಲ್ಲಿ, ಆಯಾ ಪ್ರವರ್ಗದ ಇತರೆ ಅರ್ಹ ಅಭ್ಯರ್ಥಿಗಳಿಂದ ಭರ್ತಿ ಮಾಡತಕ್ಕದ್ದು.

9. ನೇರ ನೇಮಕಾತಿಯ ಸಂದರ್ಭದಲ್ಲಿ, ಉಳಿದ ಸಮತಳ ಮೀಸಲಾತಿಗಳಾದ ಮಾಜಿ ಸೈನಿಕರಿಗೆ, ಯೋಜನೆಗಳಿಂದ ನಿರ್ವಸಿತರಾದವರಿಗೆ, ಮಹಿಳೆಯರಿಗೆ, ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳಿಗೆ, ತೃತೀಯ ಲಿಂಗಿಗಳಿಗೆ ಹಾಗೂ ಗ್ರಾಮೀಣ ಅಭ್ಯರ್ಥಿಗಳಿಗೆ ಗುರುತಿಸಿರುವ ಸ್ಥಾನಗಳನ್ನು ಆ ವರ್ಗಕ್ಕೆ ಸೇರಿದ ಅಭ್ಯರ್ಥಿಗಳಿಂದ ಭರ್ತಿ ಮಾಡತಕ್ಕದ್ದು. ಒಂದು ವೇಳೆ, ಮಾಜಿ ಸೈನಿಕರಿಗೆ / ಯೋಜನೆಗಳಿಂದ ನಿರ್ವಸಿತರಾದವರಿಗೆ/ತೃತೀಯ ಲಿಂಗಿಗಳಿಗೆ ಸಂಬಂಧಿಸಿದ ಸಮತಳ ಮೀಸಲಾತಿ ವರ್ಗಕ್ಕೆ ಮೀಸಲಿರಿಸಿದ ರಿಕ್ತಸ್ಥಾನಗಳಿಗೆ ಎದುರಾಗಿ ಆ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ, ಆ ರಿಕ್ತಸ್ಥಾನಗಳನ್ನು ಅದೇ ನೇರ ಮೀಸಲಾತಿ (vertical reservation) ಗೆ ಸೇರಿದ ಇತರೆ ಅಭ್ಯರ್ಥಿಗಳಿಂದ ಭರ್ತಿ ಮಾಡತಕ್ಕದ್ದು. ಮಹಿಳೆಯರಿಗೆ ಮೀಸಲಿರಿಸಿದ ರಿಕ್ತ ಸ್ಥಾನಗಳಿಗೆ ಎದುರಾಗಿ ಆ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ, ಆ ರಿಕ್ತಸ್ಥಾನಗಳನ್ನು ಅದೇ ನೇರ ಮೀಸಲಾತಿ (vertical reservation) ಗೆ ಸೇರಿದ ಪುರುಷ ಅಭ್ಯರ್ಥಿಗಳಿಂದ ಭರ್ತಿ ಮಾಡತಕ್ಕದ್ದು. ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳಿಗೆ ಮತ್ತು ಗ್ರಾಮೀಣ ಅಭ್ಯರ್ಥಿಗಳಿಗೆ ಗುರುತಿಸಿರುವ ಸ್ಥಾನಗಳನ್ನು ಆ ವರ್ಗಕ್ಕೆ ಸೇರಿದ ಅಭ್ಯರ್ಥಿಗಳಿಂದಲೇ ಭರ್ತಿ ಮಾಡತಕ್ಕದ್ದು.

10. ಈ ಆದೇಶವು ತಕ್ಷಣದಿಂದ ಜಾರಿಗೆ ಬರುತ್ತದೆ. ಈ ಆದೇಶವನ್ನು ಹೊರಡಿಸಿದ ನಂತರ ಯಾವುದೇ ನೇರ ನೇಮಕಾತಿ ಪ್ರಕ್ರಿಯೆ ಕೈಗೊಳ್ಳುವ ಸಂದರ್ಭದಲ್ಲಿ **ದಿನಾಂಕ: 28.12.2022ರ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 1 ಸೆಹಿಮ 2022ರ ಅನುಬಂಧದಲ್ಲಿರುವ ರೋಸ್ಟರಿನ ಹಾಗೂ ಈ ಆದೇಶದ ಅನುಬಂಧದಲ್ಲಿ**

..6..

8-3-2023

**ಲಗತ್ತಿಸಿರುವ ರೋಸ್ಟರಿನ ಮೊದಲನೇ ಬಿಂದುವಿನಿಂದ ಪ್ರಾರಂಭಿಸತಕ್ಕದ್ದು.** ಆದರೆ, ಯಾವುದೇ ವೃಂದದ ಹುದ್ದೆಗಳಿಗೆ ಈಗಾಗಲೇ ನೇರ ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಗೊಳಿಸಿದ್ದಲ್ಲಿ ಮತ್ತು ಆ ನೇಮಕಾತಿ ಪ್ರಕ್ರಿಯೆಯು ಈ ಆದೇಶದ ದಿನಾಂಕದಂದು ಬಾಕಿ ಇದ್ದಲ್ಲಿ, ಅಂತಹ ನೇರ ನೇಮಕಾತಿ ಪ್ರಕ್ರಿಯೆಯನ್ನು ಮೇಲೆ (2)ರಲ್ಲಿ ಓದಲಾದ ದಿನಾಂಕ: 22.11.2002ರ ಸರ್ಕಾರದ ಆದೇಶದ ಅನುಬಂಧದಲ್ಲಿ ಗೊತ್ತುಪಡಿಸಿದ ರೋಸ್ಟರನ್ನು ಅನುಸರಿಸಿ ಪೂರ್ಣಗೊಳಿಸತಕ್ಕದ್ದು.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ವೀರಭದ್ರು)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು-1).

ಇವರಿಗೆ:
ಸಂಕಲನಕಾರರು, ಇ-ರಾಜ್ಯಪತ್ರ

ಪ್ರತಿ:
1. ಪ್ರಧಾನ ಮಹಾಲೇಖಪಾಲರು, (ಜಿ&ಎಸ್‌ಎಸ್ಎ), (ಇ &ಆರ್‌ಎಸ್ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿಯವರು.
4. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರು.
5. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಯವರು/ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
6. *ನಿವಾಸಿ ಆಯುಕ್ತರು, ಕರ್ನಾಟಕ ಭವನ, ಕೌಟಿಲ್ಯ ಮಾರ್ಗ, ನವದೆಹಲಿ.
7. *ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ ವಿಧಾನ ಪರಿಷತ್ತು, ಬೆಂಗಳೂರು.
8. *ಮಹಾನಿಬಂಧಕರು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
9. *ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು.
10. *ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು
11. *ನಿಬಂಧಕರು, ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, 6 ಮತ್ತು 7ನೇ ಮಹಡಿ, ಕಂದಾಯ ಭವನ, ಕೆ.ಜಿ. ರಸ್ತೆ, ಬೆಂಗಳೂರು-560009.

12.*ನಿಬಂಧಕರು, ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣ, ಬಹುಮಹಡಿ ಕಟ್ಟಡ, ಬೆಂಗಳೂರು.
13. ಎಲ್ಲಾ ಇಲಾಖಾ ಮುಖ್ಯಸ್ಥರು
14. ಎಲ್ಲಾ ಪ್ರಾದೇಶಿಕ ಆಯುಕ್ತರು/ ಜಿಲ್ಲಾಧಿಕಾರಿಗಳು/ ಮುಖ್ಯ ಕಾರ್ಯನಿರ್ವಾಹಣಾ ಅಧಿಕಾರಿಗಳು, ಜಿಲ್ಲಾ ಪಂಚಾಯತ್.
15. ಎಲ್ಲಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು.
16. ಸರ್ಕಾರದ ಜಂಟಿ ಕಾರ್ಯದರ್ಶಿ (ಸಚಿವ ಸಂಪುಟ)
17. ಸರ್ಕಾರದ ಎಲ್ಲಾ ವಿಶೇಷ/ ಅಪರ/ ಜಂಟಿ/ ಉಪ/ ಅಧೀನ ಕಾರ್ಯದರ್ಶಿಗಳು
18. ಶಾಖಾ ರಕ್ಷಾ ಕಡತ/ ಅಧಿಕ ಪ್ರತಿಗಳು
(*ಮುಖಪತ್ರದೊಂದಿಗೆ)

# ಅನುಬಂಧ

**ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 2 ಸೇಹಿಮ 2023, ದಿನಾಂಕ: 08.03.2023**

| | | | | | | | | | |
|---|---|---|---|---|---|---|---|---|---|
| 01 | ಇತರೆ | 21 | ಇತರೆ | 41 | ಇತರೆ | 61 | ಇತರೆ | 81 | ಇತರೆ |
| 02 | ಮ.ಅ | 22 | ಮ.ಅ | 42 | ಮ.ಅ | 62 | ಮ.ಅ | 82 | ಮ.ಅ |
| 03 | ಗ್ರಾ.ಅ. | 23 | ಗ್ರಾ.ಅ. | 43 | ಗ್ರಾ.ಅ. | 63 | ಗ್ರಾ.ಅ. | 83 | ಗ್ರಾ.ಅ. |
| 04 | ಅಂ.ವಿ. | 24 | ಅಂ.ವಿ. | 44 | ಅಂ.ವಿ. | 64 | ಅಂ.ವಿ. | 84 | ಅಂ.ವಿ. |
| 05 | ಮ.ಅ | 25 | ಮ.ಅ | 45 | ಮ.ಅ | 65 | ಮ.ಅ | 85 | ಮ.ಅ |
| 06 | ಗ್ರಾ.ಅ. | 26 | ಗ್ರಾ.ಅ. | 46 | ಗ್ರಾ.ಅ. | 66 | ಗ್ರಾ.ಅ. | 86 | ಗ್ರಾ.ಅ. |
| 07 | ಇತರೆ | 27 | ಇತರೆ | 47 | ಇತರೆ | 67 | ಇತರೆ | 87 | ಇತರೆ |
| 08 | ಮ.ಅ. | 28 | ಮ.ಅ. | 48 | ಮ.ಅ. | 68 | ಮ.ಅ. | 88 | ಮ.ಅ. |
| 09 | ಗ್ರಾ.ಅ. | 29 | ಗ್ರಾ.ಅ. | 49 | ಗ್ರಾ.ಅ. | 69 | ಗ್ರಾ.ಅ. | 89 | ಗ್ರಾ.ಅ. |
| 10 | ಮಾ.ಸೈ. | 30 | ಮಾ.ಸೈ. | 50 | ಮಾ.ಸೈ. | 70 | ಮಾ.ಸೈ. | 90 | ಮಾ.ಸೈ. |
| 11 | ಮ.ಅ | 31 | ಇತರೆ | 51 | ಮ.ಅ | 71 | ಇತರೆ | 91 | ಮ.ಅ |
| 12 | ಮ.ಅ | 32 | ಮ.ಅ | 52 | ಮ.ಅ | 72 | ಮ.ಅ | 92 | ಮ.ಅ |
| 13 | ಗ್ರಾ.ಅ. | 33 | ಗ್ರಾ.ಅ. | 53 | ಗ್ರಾ.ಅ. | 73 | ಗ್ರಾ.ಅ. | 93 | ಗ್ರಾ.ಅ. |
| 14 | ಕ.ಮಾ.ಅ. | 34 | ಕ.ಮಾ.ಅ. | 54 | ಕ.ಮಾ.ಅ. | 74 | ಕ.ಮಾ.ಅ. | 94 | ಕ.ಮಾ.ಅ. |
| 15 | ಮ.ಅ | 35 | ಮ.ಅ | 55 | ಮ.ಅ | 75 | ಮ.ಅ | 95 | ಮ.ಅ |
| 16 | ಗ್ರಾ.ಅ. | 36 | ಗ್ರಾ.ಅ. | 56 | ಗ್ರಾ.ಅ. | 76 | ಗ್ರಾ.ಅ. | 96 | ಗ್ರಾ.ಅ. |
| 17 | ಯೋ.ಅ. | 37 | ಯೋ.ಅ. | 57 | ಯೋ.ಅ. | 77 | ಯೋ.ಅ | 97 | ಯೋ.ಅ. |
| 18 | ಮ.ಅ | 38 | ಮ.ಅ | 58 | ಮ.ಅ | 78 | ಮ.ಅ | 98 | ಮ.ಅ |
| 19 | ತೃ.ಲಿಂ. | 39 | ಇತರೆ | 59 | ಇತರೆ | 79 | ಇತರೆ | 99 | ಇತರೆ |
| 20 | ಮಾ.ಸೈ. | 40 | ಮಾ.ಸೈ. | 60 | ಮಾ.ಸೈ. | 80 | ಮಾ.ಸೈ. | 100 | ಮಾ.ಸೈ. |

**ಟಿಪ್ಪಣಿ-1**

| | |
|---|---|
| ಮ. ಅ. | ಮಹಿಳಾ ಅಭ್ಯರ್ಥಿ |
| ಮಾ.ಸೈ. | ಮಾಜಿ ಸೈನಿಕರು |
| ಅಂ.ವಿ. | ಅಂಗವಿಕಲ ಅಭ್ಯರ್ಥಿ |
| ಯೋ.ಅ. | ಯೋಜನೆಗಳಿಂದ ನಿರಾಶ್ರಿತಗೊಂಡ ಅಭ್ಯರ್ಥಿ |
| ಗ್ರಾ.ಅ. | ಗ್ರಾಮೀಣ ಅಭ್ಯರ್ಥಿ |
| ಕ.ಮಾ.ಅ. | ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ |
| ತೃ.ಲಿಂ. | ತೃತೀಯ ಲಿಂಗಿಗಳಿಗೆ |

8-3-2023

## ಟಿಪ್ಪಣಿ-2

1. **ಗ್ರೂಪ್-ಎ ಮತ್ತು ಗ್ರೂಪ್-ಬಿ** ವೃಂದದ ಹುದ್ದೆಗಳಿಗೆ ನೇರ ನೇಮಕಾತಿ ಮಾಡುವ ಸಂದರ್ಭದಲ್ಲಿ, ಮೇಲಿನ ಸಮತಳ ಮೀಸಲಾತಿ ರೋಸ್ಟರಿನಲ್ಲಿ ಅಂಗವಿಕಲರಿಗೆ ಗುರುತಿಸಿರುವ 4, 24, 44, 64 ಮತ್ತು 84 ನೇ ಬಿಂದುಗಳಲ್ಲಿ 84ನೇ ಬಿಂದುವನ್ನು ಪರಿಗಣಿಸದೇ ಅದೇ ಪ್ರವರ್ಗಕ್ಕೆ ಸೇರಿದ ಇತರೆ ಅಭ್ಯರ್ಥಿಗಳಿಂದ ಭರ್ತಿ ಮಾಡತಕ್ಕದ್ದು.

2. **ಗ್ರೂಪ್-ಎ ಮತ್ತು ಗ್ರೂಪ್-ಬಿ** ಹುದ್ದೆಗಳಿಗೆ ನೇರ ನೇಮಕಾತಿ ಮಾಡುವ ಸಂದರ್ಭದಲ್ಲಿ ಸಮತಳ ಮೀಸಲಾತಿ ರೋಸ್ಟರಿನಲ್ಲಿ ಯೋಜನೆಗಳಿಂದ ನಿರ್ವಸಿತರಾದ ಅಭ್ಯರ್ಥಿಗಳಿಗೆ ಗುರುತಿಸಿರುವ ಬಿಂದುಗಳನ್ನು ಪರಿಗಣಿಸದೇ ಅದೇ ಪ್ರವರ್ಗಕ್ಕೆ ಸೇರಿದ ಇತರ ಅಭ್ಯರ್ಥಿಗಳಿಂದ ಭರ್ತಿ ಮಾಡತಕ್ಕದ್ದು.

6-3-2023